**ವ್ಯಾಖ್ಯಾನ**

# ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 72.

**ಶ್ರೀ ಪುರಂದರ ದಾಸರ ಉಗಾಭೋಗದ ಚಿಂತನೆ:**

**ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು**
**ತನುಶುದ್ಧಿಯಿಲ್ಲದವಗೆ ತೀರ್ಥದ ಫಲವೇನು**
**ಮೀನು ಮೊಸಳೆಗಳಂತೆ ಇದ್ದಲ್ಲಿ ಫಲವೇನು**
**ಶ್ರೀಶೈಲದ ಕಾಗೆಯಂತೆ ಹೊರಗೆ ಮಿಂದು**
**ಒಳಗೆ ಮೀಯದ ಜನರ ಕಂಡು**
**ನಗುತಿಪ್ಪ ಬೆರಗಾಗಿ ಪುರಂದರವಿಠಲ ॥**

ಶ್ರೀಪುರಂದರದಾಸರು ತಮ್ಮ ಚಿಕ್ಕ–ಚೊಕ್ಕ ಮಾತುಗಳಲ್ಲಿ ಅರಿಯುವಷ್ಟು ಸಂಗತಿಯನ್ನು ಅಡಗಿಸಿ, ಸಜ್ಜನರಿಗೆ ಒದಗುವ ಅಡ್ಡಿ – ಆತಂಕಗಳನ್ನು ನಿವಾರಿಸುವರು. ಇದು ಉಗಾಭೋಗಗಳ ವೈಶಿಷ್ಟ್ಯವಾಗಿದೆ. ಜೀವನದಲ್ಲಿ ಯಾವದೇ ಸತ್ಕರ್ಮಾನುಷ್ಠಾನಕ್ಕೆ, ಸುಲಭದಿ ಜೀವಿಸಲು ಹಾಗೂ ಫಲಸಿದ್ಧಿಗಾಗಿ, ಮಾಡಬೇಕಾದ–ಇರಬೇಕಾದ ರೀತಿ–ನೀತಿಗಳನ್ನು ನಮ್ಮ ಮುಂದಿಟ್ಟು ಉದ್ಧಾರದ ಮಾರ್ಗವನ್ನು ತೋರುವರು. ಇದು ಹರಿದಾಸರು ತೋರಿದ ಮಾಡಿದ ಬಹೂಪಕಾರ. ಈ ಉಗಾಭೋಗದಲ್ಲಿಯ ಒಂದೊಂದು ಮಾತುಗಳೂ ಉದ್ಬೋಧಕ ಹಾಗೂ ಸದ್ಬೋಧಕವಾಗಿದೆ.

ಶ್ರೀಕೃಷ್ಣ ಗೀತೆಯಲ್ಲಿ **'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ'** ಯಾವದೆ ಸಂಸಾರದ ಬಂಧನಕ್ಕೂ, ವಿಮೋಚನೆಗೂ ಮುಖ್ಯ ಕಾರಣವಾದದ್ದು ಮನಸ್ಸು ಎಂದಿರುವ ಕಾರಣ ಮನಸ್ಸು ಚಂಚಲ. ಬುದ್ಧಿಯನ್ನು ಸ್ಥಿಮಿತದಲ್ಲಿರಿಸದೆ ನೂರೆಂಟು ಕಡೆ ಅಲೆದಾಡಿಸುವುದು. ಹೀಗಿದ್ದಲ್ಲಿ ಸಾಧಕ ಜೀವಿ ಮಾಡುವ ಕಾರ್ಯ, ಪಾಡಿದ ಮಂತ್ರ, ವ್ರತ–ನಿಯಮಾದಿಗಳು ಹೇಗೆತಾನೆ ಫಲ ನೀಡಬಲ್ಲದು. ಮೊದಲು ಮನಸ್ಸನ್ನು ನಿಯಂತ್ರಿಸಿಕೊಂಡು, ಏಕಾಗ್ರಚಿತ್ತನಾಗಿ, ಭಗವದಾರಾಧನೆ ಮಾಡಿದಲ್ಲಿ ಮಾತ್ರ

ಕರ್ಮಫಲವೆಂದು ತಿಳಿಸಿದರು. ತೈಲ ದೀಪವು ಋಜುವಾಗಿ ಇರಲು ಸುತ್ತಲ ಗಾಳಿಯನ್ನೂ ನಿಯಂತ್ರಿಸಬೇಕಲ್ಲವೆ. ಹೀಗೆ ಮನಸ್ಸನ್ನು ನಿಯಂತ್ರಿಸಿ ಏಕಾಗ್ರತೆ ಸಂಪಾದಿಸಲು ಅನೇಕ ಮಾರ್ಗಗಳನ್ನು ದಾಸರ ಕೃತಿಗಳಲ್ಲಿ ಕಾಣಬಹುದು. ಅಂತಃಕರಣ ಶುದ್ಧಿಯಿಂದ ಮಾಡಿದ ಕಾರ್ಯ, ಪಠಿಸುವ ಮಂತ್ರದ ಶುದ್ಧಿ ಹಾಗೂ ಸಿದ್ಧಿ ಎಂಬುದು ತತ್ತ್ವವಾಗಿದೆ.

**'ಸಾಧನ ಶರೀರವಿದು ನೀದಯದಿ ಕೊಟ್ಟದ್ದು ಸಾಧಾರಣವಲ್ಲ'** ಎಂದು ದಾಸರು ಹೇಳದ್ದು ನಮಗಾಗಿ. **'ಇದಂ ಶರೀರಂ ಖಲು ಧರ್ಮಸಾಧನಂ'** ಎಂದ ಮಾತು ಇದಕ್ಕೆ ಪೂರಕ. ನಮ್ಮ ಶರೀರದ ಬಾಹ್ಯ ಹಾಗೂ ಆಂತರಿಕ ಶುದ್ಧಿಯು ಅಷ್ಟೆ ಮುಖ್ಯವಾದದ್ದು. ನಿತ್ಯ ಊರ್ಧ್ವಪುಂಡ್ರಧಾರಣ, ಸ್ನಾನ ಸಂಧ್ಯಾದಿ ಕರ್ಮಗಳು, ಶುದ್ಧಾಹಾರಸೇವನೆ, ನಡೆ–ನುಡಿಗಳು, ಸದಾಚಾರ–ಸದ್ವಿಚಾರಗಳಿಂದ ತನುಶುದ್ಧಿ. ಶುದ್ಧದೇಹಿ ಮಾಡುವ ತೀರ್ಥಯಾತ್ರೆ ಮಾತ್ರ ಫಲದಾಯಕ. ತೀರ್ಥ ಎಂದರೆ ಶಾಸ್ತ್ರ. ಶಾಸ್ತ್ರಾಧ್ಯಯನದ ಫಲವೂ ತನು–ಮನ ಶುದ್ಧಿಯಿಂದ. ಸ್ವಾರ್ಥ–ಪ್ರತಿಷ್ಠೆಗಳಿಂದ ಸಾಧಿಸಿದ ವಿದ್ಯೆಯು ಸಫಲಿಸದು. ಇದಕ್ಕೆ ದಾಸರು ಕೊಟ್ಟ ಉದಾಹರಣೆ ಮೀನು ಮೊಸಳೆಯಂತೆ ಎಂದು. ದೇವನದಿ–ವಿಷ್ಣುಪದಿ ಎನಿಸಿದ ಗಂಗಾದಿ ನದಿಗಳಲ್ಲಿ ಸದಾ ಇದ್ದು ಮಿಂದರೆ ಫಲವೇನು. ಮಾಹಾತ್ಮ್ಯೆ ತಿಳಿಯದ ಅನುಸಂಧಾನಾದಿಗಳಿಲ್ಲದ ಇರುವಿಕೆಗೆ ಫಲವಿದೆಯೆ ಎಂದು ಕೇಳುವರು. ಇದರಂತೆ ಕಾಗೆ, ಅಶ್ವತ್ಥಾದಿ ವೃಕ್ಷಗಳ ಮೇಲೆ, ಸತ್ ಕ್ಷೇತ್ರಗಳಲ್ಲಿ ವಾಸಿಸಿದರೂ ತೀರ್ಥಗಳಲ್ಲಿ ಮಿಂದರೂ ಫಲವುಂಟೇ ಎಂದರು. ಆದರೆ ಬುದ್ಧಿಯುಳ್ಳ ಮನುಷ್ಯರು ಕ್ಷೇತ್ರಗಳಲ್ಲಿ ನಿಯಮಗಳಿಗೆ ವಿರುದ್ಧವಾಗಿ ನಡೆದಲ್ಲಿ ಪಾಪಘಟನೆಯೇ ಹೆಚ್ಚಾಗುವುದು. ಇಲ್ಲಿ ದಾಸರ ಒಂದೊಂದು ಮಾತಿನಲ್ಲೂ ವಿಶೇಷತೆಯನ್ನು ಗಮನಿಸಬೇಕು. ಇಲ್ಲಿ ಎಚ್ಚರಿಕೆಯ ಆದೇಶವೂ ಇದೆ. ಭಗವಂತ ಅವರವರ ಯೋಗ್ಯತಾನುಸಾರವಾಗಿ ಸಾಧನೆಗಳನ್ನು ಪೂರೈಸಿಕೊಂಡು ಉದ್ಧಾರವಾಗಲೆಂದು ಇಂತಹ ದುರ್ಲಭವಾದ ಶರೀರವನ್ನು ಕೊಟ್ಟು ಹುಟ್ಟಿಸಿದ. ಇದರ ಸದುಪಯೋಗ ಪಡಿಸಿಕೊಳ್ಳದಿದ್ದಲ್ಲಿ ವ್ಯರ್ಥವಲ್ಲವೆ ! ಹೇಗೋ ಇದ್ದು ಹೇಗೋ ಬದುಕಿ ಜೀವಿಸುವವರನ್ನು ಕಂಡು ಪುರಂದರವಿಠಲನು ನಗುತಿಪ್ಪ ಎಂದು ಉಚ್ಚರಿಸಿ ಎಚ್ಚರಿಸುವರು. ಇದು ಶ್ರೀಪುರಂದರದಾಸರು ಬಾರಿಸಿದ ಗಂಟೆಯೂ ಹೌದು.

ಮಾನವ ಜನುಮ ಬಂದಾಗ, ಅದರಲ್ಲೂ ಶುದ್ಧವೈಷ್ಣವನಾಗಿ ಇದ್ದಾಗ, ಸಾಧನೆಯ ಮಾರ್ಗ ಕಾಣದವನು–ಅನುಸರಿಸದವನು ಮೀನು ಕಾಗೆಗೆ ಸಮಾನನೆನಿಸುವ. ಅಂತಃಕರಣ ಶುದ್ಧಿ, ಸಮೀಚೀನ ಜ್ಞಾನ ಹೊಂದಿ ತನುಶುದ್ಧಿಯನ್ನೂ ಪಡೆದು ಗುರುಹಿರಿಯರಿಗೆ ಬಾಗದವನು ಇದ್ದರೇನು ಇಲ್ಲದಿದ್ದರೇನು ಎಂಬ ಸತ್ಯಾಂಶವನ್ನು ಬೋಧಿಸಿ ಕಣ್ಣು ತೆರೆಸಿದವರು ಶ್ರೀಪುರಂದರದಾಸರು.

**ಶ್ರೀ ಕೃಷ್ಣಾರ್ಪಣಮಸ್ತು**